ಏರುಪೇರಿನಿಂದ ಲೈಂಗಿಕ ಆಸಕ್ತಿ ವ್ಯತ್ಯಾಸವಾಗುವ ಸಂಭವವಿದೆ. ಅಂದರೆ ಗರ್ಭಿಣಿಯರಲ್ಲಿ, ಬಾಣಂತನದಲ್ಲಿ ಮಗುವಿನ ಬಗ್ಗೆಯೇ ಹೆಚ್ಚು ಕಾಳಜಿ ಹಾಗೂ ಮುಟ್ಟಿನ ಮುನ್ನ ದಿನಗಳಲ್ಲಿ ಲೈಂಗಿಕ ಆಸಕ್ತಿ ಕುಂದಿ ಗಂಡ ಹೆಂಡತಿಯರಲ್ಲಿ ಮನಸ್ತಾಪಗಳು ಉಂಟಾಗಬಹುದು. ಋತುಬಂಧದ ಸಮಯದಲ್ಲಾಗುವ ಹಾರ್ಮೋನುಗಳ ಏರುಪೇರಿನಿಂದ ಲೈಂಗಿಕ ಬಯಕೆಗಳಲ್ಲಿ ವ್ಯತ್ಯಾಸಗಳಾಗಿ ಆ ತಲ್ಲಣಗಳನ್ನು ಎದುರಿಸುವಲ್ಲಿ ಕಷ್ಟವಾಗಬಹುದು. ಜೊತೆಗೆ ಮಹಿಳೆ ಉದ್ಯೋಗಸ್ಥೆಯಾದರಂತೂ ಕೌಟುಂಬಿಕ ಹಾಗೂ ಉದ್ಯೋಗ ಎರಡನ್ನು ನಿರ್ವಹಿಸಬೇಕಾದಾಗ ಅತಿಯಾದ ದಣಿವಿನಿಂದಲೂ ಲೈಂಗಿಕ ಆಸಕ್ತಿಯನ್ನು ಕಳೆದುಕೊಳ್ಳುತ್ತಾ ಹೋಗಿ ಇದು ದಂಪತಿಗಳಲ್ಲಿ ಪರಸ್ಪರ ಅತೃಪ್ತಿಯ ಹೊಗೆಯಾಡುತ್ತಿರಲು ಕಾರಣವಾಗಬಹುದು.

ಇವೆಲ್ಲದರ ಜೊತೆಗೆ ಗಾಯದ ಮೇಲೆ ಉಪ್ಪು ಸುರಿದ ಹಾಗೆ ಕೆಲವೊಮ್ಮೆ ಹಲವು ದೈಹಿಕ ಕಾರಣಗಳಿಂದ ಸಂಭೋಗದಲ್ಲಿಯೇ ನೋವುಂಟಾಗಿ ಹೇಳಿಕೊಳ್ಳಲು ಆಗದ ಸ್ಥಿತಿ ಉಂಟಾಗಬಹುದು. ಇಂತಹ ನೋವಿನಿಂದ ಕೂಡಿದ ಸಂಭೋಗ ಅಥವಾ ಲೈಂಗಿಕ ಕ್ರಿಯೆಯನ್ನು ವೈದ್ಯಕೀಯ ಪರಿಭಾಷೆಯಲ್ಲಿ ಡಿಸ್ಪಾರೂನಿಯ ಎನ್ನುತ್ತಾರೆ.

## ಬಾಹ್ಯ ಕಾರಣಗಳು

ಯೋನಿ ದ್ವಾರದಲ್ಲಿ ಜನ್ಮಜಾತವಾಗಿ ಬಂದ ಗಟ್ಟಿಯಾದ ಯೋನಿ ಪೊರೆ
ಯೋನಿಯಲ್ಲಿ ಅಡ್ಡಗೋಡೆ
ಯೋನಿ ಮಾರ್ಗದಲ್ಲಾಗುವ ಗಾಯಗಳು, ಯೋನಿಯ ಹುಣ್ಣುಗಳು
ಯೋನಿಯಲ್ಲಾಗುವ ಸೋಂಕು ಹಾಗೂ ಇದರಿಂದಾಗುವ ಬಾವು ಹಾಗೂ ಉರಿಯೂತ
ಕಷ್ಟಕರ ಹೆರಿಗೆಯಲ್ಲಾಗುವ ಹೊಲಿಗೆಗಳಿಂದ ಮತ್ತು ಯೋನಿ ಮಾರ್ಗವಾಗಿ ಗರ್ಭಕೋಶ ತೆಗೆದಾಗ (ವೆಜೈನಲ್ ಹಿಸ್ಟರೆಕ್ಟಮಿ) ಅದನ್ನು ಕತ್ತರಿಸಿ ಚಿಕ್ಕದು ಮಾಡಿರುವುದರಿಂದ
ಯೋನಿ ದ್ವಾರದಲ್ಲಿ ಇರುವ ಗಡ್ಡೆಗಳು, ಬಾರ್ಥೋಲಿನ್ ಗ್ರಂಥಿಯ ಊತ
ಕೆಲವೊಮ್ಮೆ ಯಾವುದೇ ಕಂಡುಹಿಡಿಯಬಹುದಾದ ತೊಂದರೆ ಇಲ್ಲದಿದ್ದರೂ ಯೋನಿ ಮಾರ್ಗದಲ್ಲಿ ಆಗುವ ನೋವು (ವಲ್ವೋಡೈನಿಯಾ)
ಮುಟ್ಟು ನಿಂತ ಮೇಲಾಗುವ ಈಸ್ಟ್ರೋಜನ್ ಹಾರ್ಮೋನು ಕೊರತೆಯಿಂದಾಗಿ ಯೋನಿಯ ಒಣಗುವಿಕೆ.
ಕ್ಯಾನ್ಸರ್‌ಗಾಗಿ ತೆಗೆದುಕೊಳ್ಳುವ ವಿಕಿರಣ ಚಿಕಿತ್ಸೆಯಿಂದ



## ಆಳವಾದ ಕಾರಣಗಳು

ಗರ್ಭಕಂಠದ ಸೋಂಕು, ಗರ್ಭಾಶಯ, ಗರ್ಭನಾಳ/ ಅಂಡಾಶಯದ ಸೋಂಕು, ಎಂಡೋಮೆಟ್ರಿಯೋಸಿಸ್, ಗರ್ಭಕೋಶ ಹಿಂದಕ್ಕೆ ಬಾಗಿರುವುದು (ರಿಟ್ರೋವರ್ಷನ್), ಅಂಡಾಶಯದ ಗಂಟುಗಳು/ಗಡ್ಡೆಗಳಾಗುವುದು.

ಮೂತ್ರಕೋಶದ ಸೋಂಕು (ಸಿಸ್ಟೈಟಿಸ್), ಶಸ್ತ್ರಚಿಕಿತ್ಸೆಯಿಂದ ಅಡೆಶನ್ಸ್ ಆಗುವಿಕೆ, ಸೊಜೋನ್ಸಿಂಡ್ರೋಮ್‌ನ  ಭಾಗವಾಗಿ ಯೋನಿ ಮಾರ್ಗ ಒಣಗುವಿಕೆ.

ಇನ್ನೂ ಲೈಂಗಿಕ ಅಜ್ಞಾನ, ಮಾನಸಿಕ ಕಾರಣಗಳು, ಕೆಲವು ಬಾಲ್ಯದ ಕಹಿ ಅನುಭವಗಳಿಂದ, ಇನ್ನೂ ಕೆಲವರಲ್ಲಿ ಗರ್ಭಧಾರಣೆ ಭಯದಿಂದ ಸರಿಯಾಗಿ ಸಹಕರಿಸದೇ ಇರಬಹುದು.

ಇನ್ನೂ ಕೆಲವರಲ್ಲಿ ಸರಿಯಾದ ಪರಸ್ಪರ ಸ್ಪರ್ಶ, ಪ್ರೀತಿ, ಮುನ್ನಲಿವು ಇಲ್ಲದಿದ್ದಾಗ ಯೋನಿಯನ್ನು ತೇವವಾಗಿಸುವ ದ್ರವ ಸರಿಯಾಗಿ ಸ್ರವಿಸದೆ ಡಿಸ್ಪಾರೂನಿಯ ಆಗಬಹುದು. ಕಾರಣ ಏನೇ ಇರಲಿ ಪರಿಣಾಮ ಮಾತ್ರ ಗಂಡ ಹೆಂಡತಿಯರಲ್ಲಿ ಅಸಮಾಧಾನ, ಕುಟುಂಬದಲ್ಲಿ ಅಸಂತೋಷ ಹಾಗಾಗಿ ವಿಷಯವನ್ನು ಮುಚ್ಚಿಡದೆ ವೈದ್ಯರನ್ನು ಕಂಡು ಮುಕ್ತವಾಗಿ ತಮ್ಮ ತೊಂದರೆಗಳನ್ನು ಬಿಡಿಸಿ ಹೇಳಿದಾಗ ಮಾತ್ರ ಸರಿಯಾದ ಕಾರಣ ಪತ್ತೆ ಹಚ್ಚಿ ನಿರ್ದಿಷ್ಟ ಚಿಕಿತ್ಸೆ ಕೊಡುವುದು ಸುಲಭ.

## ಚಿಕಿತ್ಸೆ ಹೇಗೆ?

ಪ್ರಸ್ತುತ ಪರಿಸ್ಥಿತಿಯಲ್ಲಿ ನಮ್ಮ ಸಮಾಜದಲ್ಲಿ ವಿವಾಹಕ್ಕೂ ಮೊದಲು ಸ್ತ್ರೀ ಪುರುಷರ ಅಂಗರಚನೆ ಹಾಗೂ ಕಾರ್ಯವೈಖರಿಗಳ ಬಗ್ಗೆ ಅಗತ್ಯ ಮಾಹಿತಿ ಸರಿಯಾಗಿ ಇಲ್ಲ. ಜೊತೆಗೆ ಲೈಂಗಿಕ ಕ್ರಿಯೆಯ ಬಗೆಗಿನ ಅಜ್ಞಾನ, ಅಪನಂಬಿಕೆಗಳನ್ನು ಹೋಗಲಾಡಿಸಬೇಕು.

ಜನ್ಮಜಾತವಾಗಿ ಯೋನಿಪೊರೆ ಗಟ್ಟಿಯಾಗಿದ್ದಾಗ ಸಣ್ಣದೊಂದು ಶಸ್ತ್ರಚಿಕಿತ್ಸೆ ಮಾಡಿ ಸರಿಪಡಿಸಬಹುದು. ಹಾಗೆಯೇ ಯೋನಿಯ ಅಡ್ಡಪೊರೆಯನ್ನು ಪ್ಲಾಸ್ಟಿಕ್ ಸರ್ಜರಿ ಮಾಡುವುದರ ಮೂಲಕ ಸರಿಪಡಿಸಬಹುದು.

ವೆಜೈನಲ್ ಹಿಸ್ಟರೆಕ್ಟಮಿ ಮಾಡುವ ಮೊದಲು, ಯೋನಿ ಆಳತೆ ಸರಿಯಾಗಿರುವಂತೆ ಸೂಕ್ತ ಮುಂಜಾಗ್ರತೆ ವಹಿಸಬೇಕು.

ಸಹಜ ಹೆರಿಗೆಯ ನಂತರ ಯೋನಿ ಮಾರ್ಗವನ್ನು ಸರಿಯಾಗಿ ಪರೀಕ್ಷಿಸಿ ಅಗತ್ಯವಿದ್ದ ಹೊಲಿಗೆಯನ್ನು ಹಾಕಬೇಕು.

ಯೋನಿ ಸೋಂಕು, ಗರ್ಭಕಂಠ (ಸರ್ವಿಕ್ಸ್), ಗರ್ಭಕೋಶ, ಗರ್ಭನಾಳ, ಅಂಡಾಶಯಗಳ ಸೋಂಕುಗಳಿಗೆ ಸೂಕ್ತವಾದ ಆಂಟಿಬಯಾಟಿಕ್ ಮತ್ತು ಇನ್ನಿತರ ಅವಶ್ಯ ಚಿಕಿತ್ಸೆಗಳನ್ನು ಕೊಡಬೇಕು.

ಎಂಡೋಮೆಟ್ರಿಯೋಸಿಸ್ ನಂತಹ ಸಮಸ್ಯೆಗಳಿದ್ದಲ್ಲಿ ಸೂಕ್ತ ಚಿಕಿತ್ಸೆ ಕೊಡಬೇಕು.

ಋತುಬಂಧದ ನಂತರ ಈಸ್ಟ್ರೋಜನ್ ಹಾರ್ಮೋನು ಕೊರತೆಯಿಂದಾಗಿ ಉಂಟಾಗುವ ಯೋನಿ ಒಣಗುವಿಕೆಗೆ ಸೂಕ್ತ ಜೆಲ್ಲಿಯನ್ನು ಬಳಸಬಹುದು. ಒಟ್ಟಾರೆ ಯಾವುದೇ ಸಮಸ್ಯೆಯನ್ನು ಮುಚ್ಚಿಡದೆ ವೈದ್ಯರ ಹತ್ತಿರ ಸೂಕ್ತ ಸಹಾಯವನ್ನು ಪಡೆದು ಆರಂಭದಲ್ಲಿಯೇ ನಿವಾರಿಸಿಕೊಳ್ಳಲು ಪ್ರಯತ್ನಿಸ ಬೇಕು. ಸಮಸ್ಯೆಯನ್ನು ಮುಚ್ಚಿಟ್ಟು ಬಾಳನ್ನು ಗೋಳು ಮಾಡಿಕೊಳ್ಳಬಾರದು. ಪರಸ್ಪರ ಆತ್ಮೀಯತೆ ಒಲವುಗಳಿಂದ ಸಹಜವಾಗಿಯೇ ಯೋನಿ ದ್ರವವು ಸೂಕ್ತವಾಗಿ ಸ್ರವಿಸುವುದರಿಂದ ಡಿಸ್ಪಾರೂನಿಯವನ್ನು ತಡೆಗಟ್ಟಬಹುದು.

ಹದಿಹರೆಯದಲ್ಲಿಯೇ ಸೂಕ್ತ ಲೈಂಗಿಕ ಮಾಹಿತಿಯನ್ನು ನೀಡಿ ಮುಂದೆ ಉತ್ತಮ ವೈವಾಹಿಕ ಸಂಬಂಧಕ್ಕೆ ಬುನಾದಿಯನ್ನು ಹಾಕುವುದು ಪಾಲಕರು, ಶಿಕ್ಷಕರು, ವೈದ್ಯರು, ಆಪ್ತ ಸಮಾಲೋಚಕರ  ಜವಾಬ್ದಾರಿಯೂ ಆಗಿದೆ.

(ಲೇಖಕಿ ಭದ್ರಾವತಿಯಲ್ಲಿ ಸ್ತ್ರೀರೋಗ ತಜ್ಞೆ. ಸಂಪರ್ಕ: 94803 53878)